ಬಂದವರು. ಗಿರೀಶ ಕಾಸರವಳ್ಳಿ ಅವರ ಮೊದಲ ಸಿನಿಮಾ 'ಘಟಶ್ರಾದ್ಧ' ಚಿತ್ರೀಕರಣದ ಸಮಯದಲ್ಲಿಯೂ ಅವರು ಹೋಗಿಬರುತ್ತಿದ್ದರು.

'ನನಗೆ ಈಗಲೂ ಸಾಹಿತ್ಯ ಮತ್ತು ಸಿನಿಮಾ ಎರಡೂ ಅಷ್ಟೇ ಮುಖ್ಯ' ಎನ್ನುವ ಅವರಲ್ಲಿ ಅದರಲ್ಲಿಯೂ ವಿಶೇಷವಾಗಿ ಗಿರೀಶರ ಸಿನಿಮಾಗಳಲ್ಲಿನ ಕಲೆಗಾರಿಕೆ, ಸೂಕ್ಷ್ಮತೆಯ ಕುರಿತು ವಿಶೇಷ ಗೌರವವಿದೆ. ಅದರ ಜತೆಗೇ ಆ ಕಸುಬುದಾರಿಕೆ ಬೇರೆಯವರಲ್ಲಿ ಇಲ್ಲವಲ್ಲ ಎಂಬ ಬೇಸರವನ್ನೂ ಅವರು ವ್ಯಕ್ತಪಡಿಸುತ್ತಾರೆ. 'ಯಾಕೆ ಸಿನಿಮಾ ಕಲೆಗಾರಿಕೆ ಹೆಚ್ಚಿನವರಿಗೆ ಒದಗಿಲ್ಲ' ಎಂಬ ಪ್ರಶ್ನೆಯನ್ನೂ ಅವರು ಗಿರೀಶರ ಮುಂದಿಟ್ಟರು.

'ಕೆಲವೇ ಕೃತಿಗಳು ಆ ಕಾಲಧರ್ಮವನ್ನು ಹಿಡಿಯಲು ಸಮರ್ಥವಾಗುತ್ತವೆ. ಇಲ್ಲಿ ಕಾಲಧರ್ಮ ಎನ್ನುವುದು ಕೃತಿಕಾರನಿಗೆ ಮಾತ್ರ ಸಂಬಂಧಿಸಿದ್ದಲ್ಲ, ಆ ಕಾಲಕ್ಕೇ ಒಂದು ನಿರೀಕ್ಷೆಯ ಗುಣ ಇರುತ್ತದೆ. ಅದನ್ನು ಹಿಡಿದಾಕ್ಷಣ ಆ ಕೃತಿ ಶ್ರೇಷ್ಠವಾಗುತ್ತದೆ. ಹಾಗಾಗಿಯೇ ಶಿವರಾಮ ಕಾರಂತರ ಕಾದಂಬರಿ 'ಮರಳಿ ಮಣ್ಣಿಗೆ' ಕೇವಲ ಮೂರು ತಲೆಮಾರಿನ ಕಥೆಯಷ್ಟೇ ಆಗಿರದೇ ಇಡೀ ಭಾರತದ ಕಥೆಯಾಗಿಬಿಡುತ್ತದೆ. ಹಾಗೆಯೇ ಕುವೆಂಪು ಅವರು 'ಇಲ್ಲಿ ಯಾರೂ ಮುಖ್ಯರಲ್ಲ, ಯಾರೂ ಅಮುಖ್ಯರಲ್ಲ, ಎಂದು ಬರೆಯುವುದರ ಮೂಲಕ ವರ್ಣ ಹಾಗೂ ವರ್ಗ

### ಗಿರೀಶ ಕಾಸರವಳ್ಳಿ

ಕನ್ನಡ ಚಿತ್ರರಂಗಕ್ಕೆ ಅಂತರರಾಷ್ಟ್ರೀಯ ಮನ್ನಣೆ ತಂದುಕೊಟ್ಟ ನಿರ್ದೇಶಕ ಗಿರೀಶ ಕಾಸರವಳ್ಳಿ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ಕಾಸರವಳ್ಳಿಯವರು. ಪುಣೆಯ ಭಾರತೀಯ ದೂರದರ್ಶನ ಹಾಗೂ ಚಲನಚಿತ್ರ ಸಂಸ್ಥೆಯಲ್ಲಿ ಕಲಿತಿದ್ದಾರೆ. 'ಘಟಶ್ರಾದ್ಧ', 'ಆಕ್ರಮಣ', 'ಮೂರು ದಾರಿಗಳು', 'ತಬರನ ಕಥೆ', 'ಬಣ್ಣದ ವೇಷ', 'ಮನೆ', 'ಕ್ರೌರ್ಯ', 'ತಾಯಿ ಸಾಹೇಬ', 'ಹಸೀನಾ', 'ದ್ವೀಪ', 'ನಾಯಿ ನೆರಳು', 'ಗುಲಾಬಿ ಟಾಕೀಸ್', 'ಕನಸೆಂಬೋ ಕುದುರೆಯನೇರಿ', 'ಕೂರ್ಮಾವತಾರ' – ಅವರ ನಿರ್ದೇಶನದ ಚಿತ್ರಗಳು. ಕನ್ನಡ ಚಿತ್ರರಂಗಕ್ಕೆ ನಾಲ್ಕು ಸ್ವರ್ಣಕಮಲ('ಘಟಶ್ರಾದ್ಧ', 'ತಬರನ ಕಥೆ', 'ತಾಯಿ ಸಾಹೇಬ', 'ದ್ವೀಪ')ಗಳನ್ನು ಕಾಸರವಳ್ಳಿ ತಂದುಕೊಟ್ಟಿದ್ದಾರೆ. ಅವರ ಸಿನಿಮಾಗಳು ಅಂತರರಾಷ್ಟ್ರೀಯ ಚಲನಚಿತ್ರೋತ್ಸವಗಳಲ್ಲಿ ಪ್ರದರ್ಶನಗೊಂಡು, ಪ್ರೇಕ್ಷಕರ, ವಿಮರ್ಶಕರ ಮೆಚ್ಚುಗೆ ಪಡೆದಿವೆ. ಕಾಸರವಳ್ಳಿ ಅವರು ಕೆಲವು ಸಾಕ್ಷ್ಯಚಿತ್ರಗಳನ್ನೂ ನಿರ್ದೇಶಿಸಿದ್ದಾರೆ.

